


ಕಾಮಕಾಂಚನ ಆಸಕ್ತಿಯ ತ್ಯಾಗ

ಶ್ರೀರಾಮಕೃಷ್ಣರು ಒಬ್ಬ ಯುವಕನ ಕಡೆ ಬೆರಳುಮಾಡಿ ಭಕ್ತರಿಗೆ ಹೇಳುತ್ತಿದ್ದಾರೆ: "ಮನುಷ್ಯನನ್ನು ಸಂಸಾರಕ್ಕೆ ಕಟ್ಟಿಹಾಕುವ ಇವು ಮೂರು – ಭೂಮಿ, ಹೆಂಡತಿ, ಹಣ – ಈತನಲ್ಲಿ ಒಂದು ಕಿಂಚಿತ್ತೂ ಇಲ್ಲ. ಇವು ಮೂರರ ಮೇಲೆ ಮನಸ್ಸನ್ನು ಇಟ್ಟಿದ್ದೇ ಆದರೆ, ಅದನ್ನು ಮತ್ತೆ ಭಗವಂತನ ಕಡೆ ತಿರುಗಿಸ ಲಾಗುವುದಿಲ್ಲ. ಈತನಿಗೆ ಒಂದು ಅಲೌಕಿಕ ದರ್ಶನ ಕೂಡ ದೊರೆತಿರುವುದಂತೆ! ( ಆ ಯುವಕ ಭಕ್ತನಿಗೆ) ಹೇಳು, ಏನನ್ನು ಕಂಡೆ?"

**ಯುವಕ ಭಕ್ತ:** "ನಾನು ಗೊಬ್ಬರದ ರಾಶಿಯೊಂದನ್ನು ಕಂಡೆ. ಕೆಲವರು ಅದರ ಮೇಲೆ ಕುಳಿತುಕೊಂಡಿದ್ದರು. ಇನ್ನು ಕೆಲವರು ಅದನ್ನು ಬಿಟ್ಟು ಸ್ವಲ್ಪ ದೂರದಲ್ಲಿ ಕುಳಿತುಕೊಂಡಿದ್ದರು."

**ಶ್ರೀರಾಮಕೃಷ್ಣರು:** "ಈತ ಕಂಡದ್ದು ಭಗವಂತನನ್ನು ಮರೆತ ಸಂಸಾರಿಗಳು ದುರ್ದೆಶೆಗೆ ಇಳಿಯುತ್ತಾರೆ ಎಂಬುದನ್ನೂ ಮತ್ತು ಸಂಸಾರಾಸಕ್ತಿ ಈತನ ಮನಸ್ಸನ್ನು ಬಿಟ್ಟು ಹೊರಹೋಗುತ್ತಿದೆ ಎಂಬುದನ್ನೂ ಇದು ಸೂಚಿಸುತ್ತದೆ. ಕಾಮಕಾಂಚನಾಸಕ್ತಿ ಮನಸ್ಸನ್ನು ಬಿಟ್ಟು ತೊಲಗಿತು ಅಂದರೆ ಇನ್ನು ಯೋಚನೆ ಏಕೆ? ಏನಾಶ್ಚರ್ಯ ಇದು! ನಾನು ಇಷ್ಟೊಂದು ಜಪತಪ ಮಾಡಿದ ಮೇಲೆ ಇದರಲ್ಲಿನ ಆಸಕ್ತಿ ನನ್ನನ್ನು ಬಿಟ್ಟು ತೊಲಗಿತು; ಈತ ಅದರಿಂದ ಎಷ್ಟು ಬೇಗ ಮುಕ್ತನಾಗಿಬಿಟ್ಟಿದ್ದಾನೆ! ಕಾಮಾಸಕ್ತಿ ಒಮ್ಮೆಗೆಯೇ ಬಿಟ್ಟು ತೊಲಗಿಹೋಗುವುದು ಏನು ಸಾಮಾನ್ಯ ವಿಷಯವೆ? ನಾನು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ ಆರು ತಿಂಗಳ ನಂತರ ನನಗೂ ಇದರ ಸಂಬಂಧ ಒಂದು ವಿಚಿತ್ರವಾದ ಭಾವನೆ ಬಂದಿತು. ಆಗ ಒಂದು ಮರದ ಕೆಳಗೆ ಮಲಗಿ ಸುಮ್ಮನೆ ಅಳಲಾರಂಭಿಸಿದೆ; ನಾನು ಭಗವತಿಗೆ ಮೊರೆಯಿಟ್ಟೆ, 'ಅಮ್ಮ, ನೋಡು. ನನಗೇನಾದರೂ ಈ ದುಸ್ಥಿತಿ ಬಂದರೆ ಕತ್ತಿ ತೆಗೆದುಕೊಂಡು ಕತ್ತು ಕತ್ತರಿಸಿಕೊಂಡು ಬಿಡುತ್ತೇನೆ.'

(ಭಕ್ತರಿಗೆ) "ಕಾಮಕಾಂಚನಾಸಕ್ತಿ ಮನಸ್ಸನ್ನು ಬಿಟ್ಟು ತೊಲಗಿ ಹೋಯಿತು ಅಂದರೆ ಇನ್ನು ಯಾವ ತಡೆ ಉಳಿದಿದೆ? ಬಳಿಕ ಕೇವಲ ಬ್ರಹ್ಮಾನಂದ, ಬ್ರಹ್ಮಾನಂದ."

ಭಕ್ತರು ಪರಮಹಂಸರ ಈ ಮಾತುಗಳನ್ನು ನಿಶ್ಶಬ್ದರಾಗಿ ಕುಳಿತು ಕೇಳುತ್ತಿದ್ದಾರೆ.

**ಶ್ರೀರಾಮಕೃಷ್ಣರು (ಭಕ್ತರಿಗೆ):** "ಮನಸ್ಸಿನಿಂದ ಕಾಮ ಕಾಂಚನಾಸಕ್ತಿ ಸಂಪೂರ್ಣವಾಗಿ ಬಿಟ್ಟು ತೊಲಗಿ ಹೋಗದೆ ಇದ್ದರೆ, ಅವತಾರಪುರುಷರನ್ನು ಗುರುತಿಸಲು ಮನಸ್ಸಿಗೆ ಬಹಳ ಕಷ್ಟವಾಗಿ ತೋರುತ್ತದೆ. ಯಾರೊ ಒಬ್ಬ ಒಂದು ವಜ್ರವನ್ನು ತೆಗೆದುಕೊಂಡು ಹೋಗಿ ಒಬ್ಬ ಬದನೆಕಾಯಿ ಮಾರುವವನನ್ನು ಕೇಳಿದ, 'ಇದಕ್ಕೆ ಬೆಲೆ ಎಷ್ಟು?' ಅಂತ. ಆತ ಹೇಳಿದ, 'ಇದಕ್ಕೆ ನಾನು ಒಂಬತ್ತು ಸೇರು ಬದನೆಕಾಯಿ ಮಾತ್ರ ಕೊಡಬಲ್ಲೆ. ಅದರ ಮೇಲೆ ಒಂದು ಕಾಯನ್ನೂ ಅಧಿಕವಾಗಿ ಕೊಡಲಾರೆ.'

"ಬಾಲ್ಯದಿಂದಲೆ ಕಾಮಕಾಂಚನ ತ್ಯಾಗ! ಬಹಳ ಅದ್ಭುತ ವಾದದ್ದೆ! ಇದು ಎಲ್ಲೋ ಕೆಲವರಿಗೆ ದೊರೆಯುವ ಭಾಗ್ಯ ಮಾತ್ರ. ಈ ರೀತಿಯಾದ ತ್ಯಾಗವಿಲ್ಲದವನನ್ನು ಆಲಿಕಲ್ಲು ತಾಕಿದ ಮಾವಿನಹಣ್ಣಿಗೆ ಹೋಲಿಸಬಹುದು. ಅದನ್ನು ದೇವರಿ ಗಂತು ಅರ್ಪಿಸುವುದಕ್ಕೆ ಆಗುವುದೇ ಇಲ್ಲ. ಜನರೂ ಕೂಡ ಅದನ್ನು ತಿನ್ನುವುದಕ್ಕೆ ಹಿಂಜರಿಯುತ್ತಾರೆ.

"ಯೌವನದಲ್ಲಿ ಅನೇಕ ದುಷ್ಕಾರ್ಯಗಳನ್ನು ಮಾಡಿ ವೃದ್ಧಾಪ್ಯದಲ್ಲಿ ಭಗವನ್ನಾಮ ಜಪದಲ್ಲಿ ಕಾಲ ಕಳೆಯುವ ಜನರೂ ಈ ಜಗತ್ತಿನಲ್ಲಿ ಇದ್ದಾರೆ. ಅವರು ಅಧಮರಲ್ಲಿ ಮೇಲು.

**ಶ್ರೀರಾಮಕೃಷ್ಣರು (ಡಾಕ್ಟರ್‌ಗೆ):** "ನಿನ್ನ ಮಗ ಬಹಳ ಸರಳ. ಒಮ್ಮೆ ಶಂಭು ಮಲ್ಲಿಕ ಮುಖ ಕೆಂಪಗೆ ಮಾಡಿಕೊಂಡು ಹೇಳಿದ, 'ಸರಳ ಹೃದಯದಿಂದ ಭಗವಂತನನ್ನು ಕರೆದರೆ, ಆತ ಅದನ್ನು ಕೇಳಿಯೇ ಕೇಳುತ್ತಾನೆ.'

"ಹುಡುಗರನ್ನು ನಾನು ಅಷ್ಟೊಂದು ಪ್ರೀತಿಸುತ್ತೇನಲ್ಲ ಏಕೆ ಗೊತ್ತೆ? ಅವರು ಶುದ್ಧ ಹಾಲಿನಂತೆ; ಒಂದು ಸ್ವಲ್ಪ ಮರಳಿಸಿ ಬಿಟ್ಟರೆ ಸಾಕು, ದೇವರಿಗೆ ಅರ್ಪಿಸಬಹುದು. ಆದರೆ ನೀರು ಹಾಲನ್ನು ಬಹಳ ಹೊತ್ತು ಮರಳಿಸಬೇಕಾಗುತ್ತದೆ; ಅದು ಸೌದೆಯನ್ನೂ ಬಹಳವಾಗಿ ನುಂಗಿಬಿಡುತ್ತದೆ.

"ಹುಡುಗರು ಹೊಸ ಮಡಕೆಯ ಹಾಗೆ ಒಳ್ಳೆ ಪಾತ್ರೆಗಳು. ನಿಶ್ಚಿಂತೆಯಿಂದ ಅವುಗಳಲ್ಲಿ ಹಾಲಿಡಬಹುದು. ಅವರಿಗೆ ಜ್ಞಾನೋಪದೇಶ ಕೊಟ್ಟರೆ ಬಹು ಬೇಗ ಆತ್ಮಜಾಗೃತಿ ಉಂಟಾಗಿ ಬಿಡುತ್ತದೆ. ವಿಷಯಾಸಕ್ತರಿಗೆ ಬೇಗ ಆಗುವುದಿಲ್ಲ. ಮೊಸರಿನ ಮಡಕೆಯಲ್ಲಿ ಹಾಲಿಡಲು ಭಯವಾಗುತ್ತದೆ. ಏಕೆಂದರೆ ಒಡೆದು ಹೋಗುವ ಸಂಭವ.

"ಕಾಮಕಾಂಚನಾಸಕ್ತಿ ಇತ್ತು ಅಂದರೆ, ವಿದ್ಯೆಯ ಅಹಂಕಾರ, ಹಣದ ಅಹಂಕಾರ, ಉಚ್ಚ ಪದವಿಯ ಅಹಂಕಾರ ಇವೆಲ್ಲಾ ಬಂದುಬಿಡುತ್ತವೆ."